ಹೋದಾಗ, ಅದರ ಆವರಣ ಕಳಚಿಕೊಂಡಾಗ, ಪರಮಾತ್ಮನ ಅನುಗ್ರಹಸ್ವರೂಪವಾದ, ಅವನದೇ ಒಂದಂಶವಾದ 'ನಾನು' ಎಂಬ ಆತ್ಮದ ಪರಿಚಯವಾಗುತ್ತದೆ. ಶ್ರೀರಾಮಕೃಷ್ಣರು ಹೇಳುವಂತೆ, 'ಎಲ್ಲವನ್ನೂ ನಾನೇ ಮಾಡಿದೆ' ಎಂಬುದು ಅಪಕ್ವ ಅಹಂ. 'ಎಲ್ಲವೂ ಪರಮಾತ್ಮನಿಂದಲೇ ಆದದ್ದು' ಎಂದು ಭಾವಿಸುವುದು ಪಕ್ವ ಅಹಂ. ಭಗವಂತನ ಕೃಪೆಯಿಲ್ಲ ದಿದ್ದರೆ ಕೈಬೆರಳುಗಳನ್ನೂ ಅಲುಗಾಡಿಸಲು ಸಾಧ್ಯವಿಲ್ಲ. ಭಗವಂತನೇ ವೈಶ್ವಾನರನಾಗಿ ನಮ್ಮ ಆಹಾರವನ್ನು ಪಚನ ಗೊಳಿಸುತ್ತಾನೆ. ಹೃದಯದ ಬಡಿತ, ನಾಡಿಯ ಮಿಡಿತ, ರಕ್ತದ ಸಂಚಾರ – ಇವೆಲ್ಲವೂ ನಡೆಯುವುದು ಭಗವಂತನ ಅನುಗ್ರಹದಿಂದಲೇ. **"ಯೋಽಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ"** ಎಂದು ಭಾಗವತ ಹೇಳುತ್ತದೆ. ಅಖಿಲಶಕ್ತಿಯ ಆಗರನಾದ ಭಗವಂತನೇ ನಮ್ಮೆಲ್ಲರ ಮಾತಿಗೆ ಶಕ್ತಿ ನೀಡುವವನು ಎಂದು ಇದರ ತಾತ್ಪರ್ಯ. ಹಸ್ತಗಳಿಗೆ ಕರಣಶಕ್ತಿ, ಚರಣಗಳಿಗೆ ಚಲನಶಕ್ತಿ, ಶ್ರಾವಕಗಳಿಗೆ ಶ್ರವಣಶಕ್ತಿ– ಇವೆಲ್ಲವನ್ನೂ ನೀಡುವವನು ಅವನೇ. ಹಾಗಿದ್ದ ಮೇಲೆ ಅಹಂಕಾರಪಟ್ಟುಕೊಳ್ಳುವ 'ನಾನು' ಎಂಬುದು ಏನು ತಾನೆ ಮಾಡೀತು!

**ನಾನು ನಾನೆನುವ ನಿನ್ನಂತರಾತ್ಮದ ಗಂಗೆ**
**ನಾನಾ ಪ್ರಪಂಚಾಂತರಾತ್ಮ ಸಾಗರದಿ ।**
**ಲೀನವಹ ಸಂಗಮ ಸ್ಥಾನ ದೈವಪ್ರತಿಮೆ**
**ಧ್ಯಾನ ಸಂಧಾನವದು – ಮರುಳಮುನಿಯ ॥**

ಅಂತಹ ಚೈತನ್ಯಸ್ವರೂಪವಾದ ಅಂತರಾಳದ 'ನಾನು' ಎಂಬುದು ಪವಿತ್ರವಾದ ಗಂಗಾಜಲ, ವಿಧವಿಧವಾದ ಪ್ರಪಂಚದ ಅಂತರಾತ್ಮವೇ ಸಾಗರ. 'ನಾನು' ಎಂಬ ಪವಿತ್ರವಾದ ಜಲ ಈ ಸಮುದ್ರದಲ್ಲಿ ಸೇರಬೇಕು. ಅದನ್ನು ಸೇರಿಸುವ ಸಂಗಮಸ್ಥಾನವೇ ದೇವತಾವಿಗ್ರಹ. ಇದನ್ನು ಧ್ಯಾನ ಪ್ರಕ್ರಿಯೆಯಿಂದ ಮಾತ್ರ ತಿಳಿಯಲು ಸಾಧ್ಯ. ಭಗವಂತನನ್ನು ತಲುಪಲು ಧ್ಯಾನವೇ ಉತ್ತಮ ಸಾಧನ ಎಂದು ರಮಣ ಮಹರ್ಷಿಗಳೂ ತಮ್ಮ 'ಉಪದೇಶಸಾರ'ದಲ್ಲಿ ತಿಳಿಸಿದ್ದಾರೆ:

**ಉತ್ತಮಸ್ತವಾದುಚ್ಚ ಮಂದತಃ**
**ಚಿತ್ತಜಂ ಜಪಧ್ಯಾನಮುತ್ತಮಮ್ ।**
**ಆಜ್ಯಧಾರಯಾ ಸ್ರೋತಸಾ ಸಮಂ**
**ಸರಲಚಿಂತನಂ ವಿರಲತಃ ಪರಂ ॥**

ಗಟ್ಟಿಯಾಗಿ ಉಚ್ಚರಿಸುವ ಮಂತ್ರ, ಸ್ತೋತ್ರ ಪಠಣ ಇತ್ಯಾದಿಗಳಿಗಿಂತ ಮನಸ್ಸಿನಲ್ಲಿಯೇ ಮಾಡುವ ಜಪಧ್ಯಾನ ಗಳು ಪರಮಾತ್ಮನನ್ನು ಸಮೀಪಿಸಲು ಉತ್ತಮ ಸಾಧನಗಳು. ಆ ಚಿಂತನ ಹೇಗಿರಬೇಕೆಂದರೆ ತೈಲಧಾರೆಯಂತೆ ನಿರಂತರ ವಾಗಿ ಹರಿಯುತ್ತಿರಬೇಕು. ಧ್ಯಾನದ ಸೂತ್ರ ತುಂಡಾಗದಂತೆ ಎಚ್ಚರವಹಿಸಬೇಕು. ಒಟ್ಟಿನಲ್ಲಿ ಮನುಷ್ಯನ ಜೀವನ ಸಾರ್ಥಕ ವಾಗುವುದು ಭಗವಂತನ ಸಾನ್ನಿಧ್ಯದ ಪ್ರಾಪ್ತಿಯಿಂದ. ಮಾನವಜೀವನದ ಪರಮಗುರಿಯೇ ಅದು.

## ಸಾರ್ಥಕ ಗುರಿ

**ಧಾರುಣಿಯ ನಡಿಗೆಯಲಿ ಮೇರುವಿನ ಗುರಿಯಿರಲಿ**
**ಮೇರುವನು ಮರೆತಂದೆ ನಾರಕಕೆ ದಾರಿ ।**
**ದೂರವಾದೊಡದೇನು! ಕಾಲು ಕುಂಟಿರಲೇನು!**
**ಊರ ನೆನಪೇ ಬಲವೊ – ಮಂಕುತಿಮ್ಮ ॥**

ಈ ಮುಕ್ತಕದಲ್ಲಿ ಗುಂಡಪ್ಪನವರು ಸಾರ್ಥಕ ಗುರಿಯ ಬಗ್ಗೆ ಸುಂದರವಾದ ನಿದರ್ಶನವನ್ನು ನಮ್ಮ ಮುಂದಿಡುತ್ತಾರೆ. ಭೂಮಿಯ ಮೇಲೆ ನಡೆಯುವಾಗ ಮೇರುಪರ್ವತವನ್ನು ಏರುವ ಗುರಿ ಇಟ್ಟುಕೊಳ್ಳಬೇಕಂತೆ. ಅದನ್ನು ಮರೆತರೆ ನರಕಕ್ಕೆ ದಾರಿಯಾಗುತ್ತದೆ. ದೂರವಿರಲಿ, ಕಾಲು ಕುಂಟಿರಲಿ ಊರಿನ ನೆನಪಿನಲ್ಲಿ ನಡೆಯುತ್ತಾ ಗುರಿ ಸೇರುವಂತೆ, ಜೀವನದಲ್ಲಿ ಎಷ್ಟೇ ಕಷ್ಟನಷ್ಟಗಳಾದರೂ 'ಭಗವಂತನ ಪ್ರಾಪ್ತಿ' ಎಂಬ ಹೆಗ್ಗುರಿಯನ್ನು ನಾವೆಂದೂ ಮರೆಯ ಬಾರದು. "ಇಲ್ಲಿರುವುದು ಸುಮ್ಮನೆ, ಅಲ್ಲಿರುವುದು ನಮ್ಮನೆ" ಎಂಬಂತೆ ಈ ಮನೆಯನ್ನು ಬಳಸಿಕೊಂಡು ಭವಬಂಧನ ವಿಲ್ಲದ, ಹುಟ್ಟುಸಾವುಗಳ ಸಂಕೋಲೆಯಿಂದ ಬಂಧಿತವಾಗ ದಂತಹ ಆ ಶಾಶ್ವತವಾದ ಮನೆಯನ್ನು ಸೇರಬೇಕು. ಆಗಲೇ ಮನುಷ್ಯಜನ್ಮ ಸಾರ್ಥಕ. ಈ ಜಗತ್ತಿನಲ್ಲಿ ಧನ್ಯತೆಯ ಬಾಳನ್ನು ಹೇಗೆ ನಡೆಸಬೇಕು ಎಂಬುದನ್ನು ಡಿ.ವಿ.ಜಿ.ಯವರು ಈ ರೀತಿ ಸೂಚಿಸಿದ್ದಾರೆ:


**ತನ್ನ ಮನದಾಟಗಳ ತಾನೆ ನೋಡುತ ನಗುವ**
**ತನ್ನೊಳಗೆ ತಾನಿರ್ವರಾದವೊಲು ಬಾಳ್ವ ।**
**ಚಿನ್ಮಾತ್ರವನೆ ಬೇರೆ ಬಗೆದು ಜಾನಿಪ ಚತುರ**
**ಧನ್ಯತೆಯ ಕಂಡವನು – ಮಂಕುತಿಮ್ಮ ॥**

ಇಂದ್ರಿಯಗಳು ಹೊರಗಿನ ವಿಷಯಗಳಿಂದ ಆಕರ್ಷಿತ ವಾಗುತ್ತವೆ. ಅವು ಪ್ರಕೃತಿಯ ಆಡಳಿತಕ್ಕೆ ಒಳಪಟ್ಟಿವೆ. ಆದರೆ ಆತ್ಮ ಪ್ರಕೃತಿಯ ಆಡಳಿತಕ್ಕೆ ಒಳಪಟ್ಟಿಲ್ಲ. ಹೀಗಾಗಿ ಅದನ್ನು ಇಂದ್ರಿಯಗಳು ವಿಕಾರಗೊಳಿಸಲಾರವು. ಹೀಗೆ ವಿಕಾರಕ್ಕೆ ಒಳಪಡುವ ಜಗತ್ತು, ವಿಕಾರಗೊಳ್ಳದ ಆತ್ಮ – ಇವುಗಳನ್ನು ಸರಿಯಾಗಿ ತಿಳಿದು ಜ್ಞಾನಿಯಾದವನು ಜಗತ್ತಿನಲ್ಲಿ ನಡೆಯುವ ಆಟಗಳನ್ನು ನೋಡಿ ನಗುತ್ತಿರುತ್ತಾನೆ. ತನ್ನ ಅಂತರಂಗವನ್ನು ಭಗವಂತನಿಗೆ ಅರ್ಪಿಸುತ್ತಾನೆ. ಆದರೂ ಲೋಕದ ವ್ಯವಹಾರದಲ್ಲಿ ಪಾಲ್ಗೊಳ್ಳುತ್ತಾನೆ. ಒಬ್ಬನೇ ಆದರೂ ಇಬ್ಬರಂತೆ ಬಾಳ್ವೆಯನ್ನು ನಡೆಸುತ್ತಾನೆ. ಬ್ರಹ್ಮವಸ್ತು ಈ ಲೋಕದ ಕಾರ್ಯಗಳಿಗೆ ಅಂಟತಕ್ಕದ್ದಲ್ಲ ಎಂದು ತಿಳಿದು ಅದನ್ನೇ ಧ್ಯಾನಿಸುತ್ತಾನೆ. ಹಾಗೆಯೇ ಜಗತ್ತಿನ ಚಟುವಟಿಕೆಗಳಲ್ಲಿಯೂ ನಿರ್ಲಿಪ್ತನಾಗಿ ಭಾಗವಹಿಸುತ್ತಾನೆ. ಅವನೇ ನಿಜವಾದ ಚತುರ. ಜೀವಿತದ ಗುರಿಯನ್ನು ಅವನು ಸಾಧಿಸುತ್ತಾನೆ. ಹೀಗಾಗಿ ಅವನೇ ಧನ್ಯ. ಇಂಥ ಧನ್ಯತೆಯ ಬಾಳು ನಮ್ಮೆಲ್ಲರದೂ ಆಗಬೇಕಲ್ಲವೆ! •

# ಗುರುವಿನೊಡನೆ ದೇವರಡಿಗೆ...

ಧಾರಾವಾಹಿ

ಸ್ವಾಮಿ ಭೂತೇಶಾನಂದ



(ರಾಮಕೃಷ್ಣ ಮಹಾಸಂಘದ ೧೨ನೆಯ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರು, ಸಾಧುಬ್ರಹ್ಮಚಾರಿಗಳು ಮತ್ತು ಭಕ್ತರ ಜೊತೆಗೆ ಆಧ್ಯಾತ್ಮಿಕ ವಿಷಯಗಳ ಬಗ್ಗೆ ನಡೆಸುತ್ತಿದ್ದ ಸಂಭಾಷಣೆಗಳನ್ನು ರಾಮಕೃಷ್ಣ ಮಹಾಸಂಘದ ಬಂಗಾಳಿ ಮಾಸಪತ್ರಿಕೆಯಾದ 'ಉದ್ಬೋಧನ'ವು ಧಾರಾವಾಹಿಯಾಗಿ ಪ್ರಕಟಿಸುತ್ತಿದೆ. ಇದರ ಕನ್ನಡ ರೂಪಾಂತರವನ್ನು ಈ ಸಂಚಿಕೆಯಿಂದ ಪ್ರಕಟಿಸಲು ಹರ್ಷಿಸುತ್ತಿದ್ದೇವೆ. ಇವು ಆಧ್ಯಾತ್ಮಿಕ ಸಾಧಕರಿಗೆ ಅತ್ಯಂತ ಉಪಯೋಗವಾಗುವಂಥವು. ಸಾಧಕರು ಎದುರಿಸುವ ಕಷ್ಟನಷ್ಟಗಳಿಗೆ ಇಲ್ಲಿ ಸೂಕ್ತ ಪರಿಹಾರ ಸಿಕ್ಕುತ್ತದೆ; ಸಂಸಾರದಲ್ಲಿ ನೊಂದು ಬೆಂದವರಿಗೆ ಸಾಂತ್ವನವೂ ಇಲ್ಲಿ ದೊರಕುತ್ತದೆ. 'ಗುರುವಿನೊಡನೆ ದೇವರಡಿಗೆ' ಎನ್ನುವುದು ಕುವೆಂಪು ಅವರು ತಾವು ಅನುವಾದಿಸಿದ ಸ್ವಾಮಿ ಶಿವಾನಂದಜಿ ಮಹಾರಾಜ್ ಅವರ ಆಧ್ಯಾತ್ಮಿಕ ಸಂಭಾಷಣೆಗಳ ಗ್ರಂಥಕ್ಕೆ ನೀಡಿದ ಅನ್ವರ್ಥ ನಾಮಧೇಯ. ಈ ಸಂಭಾಷಣಾ ಸರಣಿಗೂ ಈ ಸುಂದರ ಹೆಸರೇ ಸೂಕ್ತವಾಗಿ ಹೊಂದುತ್ತದೆ ಎನ್ನುವುದು ನಮ್ಮ ಭಾವನೆ. ಈ ಸಂಭಾಷಣೆಗಳನ್ನು ಬಂಗಾಳಿಯಿಂದ ನೇರವಾಗಿ ಸಮರ್ಥವಾಗಿ ಅನುವಾದ ಮಾಡಿಕೊಟ್ಟವರು ಸ್ವಾಮಿ ಮಂಗಳಾತ್ಮಾನಂದಜಿ ಅವರು. ಇವರು ಸದ್ಯ ಕೊಯಮತ್ತೂರಿನ ರಾಮಕೃಷ್ಣ ಮಿಷನ್ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ನುರಿತ ಬರಹಗಾರರು ಮತ್ತು ಚಿಂತಕರು. ಇವರ ಹಲವು ಬರಹಗಳು 'ಮಂಜುವಾಣಿ ಪತ್ರಿಕೆ'ಯಲ್ಲಿ ಪ್ರಕಟವಾಗಿವೆ)

**ಪ್ರಶ್ನೆ: ಸ್ವಾಮೀಜಿ, ಗುರು ಎಂದರೆ ಯಾರು?**

**ಸ್ವಾಮೀಜಿ:** ಗುರುಗೀತೆಯಲ್ಲಿ 'ಗುರು' ಶಬ್ದದ ತಾತ್ಪರ್ಯವನ್ನು ಹೀಗೆ ವಿವರಿಸಿದೆ:

ಗುಕಾರೋಽಂಧಕಾರಸ್ತು ರುಕಾರಸ್ತನ್ನಿವರ್ತಕಃ ।
ಅಂಧಕಾರನಿವರ್ತ್ಯಾ ತು ಗುರುರಿತ್ಯಭಿಧೀಯತೇ॥

'ಗು' ಶಬ್ದದ ಅರ್ಥ ಅಂಧಕಾರ (ಅಜ್ಞಾನ); 'ರು' ಶಬ್ದದ ಅರ್ಥ ನಿರೋಧಕ (ತಡೆಯುವುದು). ಅಜ್ಞಾನವನ್ನು ಯಾರು ನಿರೋಧಕ (ನಾಶ)ಮಾಡುತ್ತಾನೋ, ಅವನಿಗೆ ಗುರುವೆಂದು ಹೇಳಲಾಗುತ್ತದೆ. ಗುರುಸ್ತೋತ್ರದಲ್ಲಿ ಹೀಗೆ ಹೇಳಿದೆ:

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಏನ ತಸ್ಮೈ ಶ್ರೀಗುರವೇ ನಮಃ ॥

ಅಜ್ಞಾನವೆಂಬ ಅಂಧಕಾರದಲ್ಲಿ ಇರುವವನ ಕಣ್ಣನ್ನು ಯಾರು ಜ್ಞಾನರೂಪದ ಶಲಾಕೆಯಿಂದ, ತೆರೆಯುವಂತೆ ಮಾಡುತ್ತಾನೋ ಅವನೇ ಗುರು.

**ಪ್ರಶ್ನೆ: ಸದ್ಗುರುವಿನ ಲಕ್ಷಣಗಳೇನು, ಸ್ವಾಮೀಜಿ?**

**ಸ್ವಾಮೀಜಿ:** ಸದ್ಗುರುವಿಗೆ ಯಾವುದೇ ತರದ ಆಸೆ, ಆಕಾಂಕ್ಷೆ, ಕಾಮನೆಗಳಿರುವುದಿಲ್ಲ. ಅವನು ತನ್ನ ಶಿಷ್ಯಂದಿರ ಸಂಖ್ಯೆಯನ್ನು ವೃದ್ಧಿಪಡಿಸಬೇಕೆಂದು ಇಚ್ಛೆಪಟ್ಟರೆ ಅದು ಗುರುವಿನ ಲಕ್ಷಣವಲ್ಲ. ಗುರುವು ಸದ್ಗುರುವಾಗಿದ್ದರೆ, ಆತನ ಸಾನ್ನಿಧ್ಯಕ್ಕೆ ಬಂದಾಗಲೇ ಮನಸ್ಸು ಶುದ್ಧವಾಗುತ್ತದೆ. ಸನ್ಮಾರ್ಗದಲ್ಲಿ ನಡೆಯುವ ಗುರುವು ಅದೇ ದಾರಿಯಲ್ಲಿ ತನ್ನ ಶಿಷ್ಯರನ್ನೂ ಕರೆದುಕೊಂಡು ಹೋಗಬಲ್ಲ. ಈ ಪಥದಲ್ಲಿ ನಡೆಯುವ ಶಿಷ್ಯನೂ ಪವಿತ್ರ ಜೀವನ ನಡೆಸಬಲ್ಲ.

**ಪ್ರಶ್ನೆ: ಕುಲಗುರುವಿನ ಹತ್ತಿರ ದೀಕ್ಷೆ ತೆಗೆದುಕೊಂಡ ಶಿಷ್ಯನಿಗೆ ಅದರಿಂದ ಏನಾದರೂ ಪ್ರಯೋಜನವಾಗುತ್ತದೆಯೇ?**

**ಸ್ವಾಮೀಜಿ:** ಭಗವನ್ನಾಮವನ್ನು ಯಾರಿಂದ ಬೇಕಾದರೂ ಸ್ವೀಕರಿಸಬಹುದು.

**ಪ್ರಶ್ನೆ: ಗುರುಕೃಪೆ ಹೇಗೆ ಆಗುತ್ತದೆ?**

**ಸ್ವಾಮೀಜಿ:** ಗುರುವನ್ನು ಪ್ರೀತಿಸುವುದರಿಂದ, ಸಂತುಷ್ಟಿಗೊಳಿಸುವುದರಿಂದ ಆತನ ಕೃಪೆ ದೊರಕುತ್ತದೆ.

**ಪ್ರಶ್ನೆ: ಗುರುವಿನ ಬಗ್ಗೆ ಶ್ರದ್ಧಾಭಕ್ತಿಗಳು ಹೇಗೆ ಬರುತ್ತವೆ, ಸ್ವಾಮೀಜಿ?**

**ಸ್ವಾಮೀಜಿ:** ಎಷ್ಟೋ ಜನ್ಮಗಳಿಂದ ಶುಭ ಕರ್ಮಗಳನ್ನು ಮಾಡುತ್ತ ಬಂದ ಹಾಗೆ, ಅದರ ಫಲವು ಶೇಖರವಾಗುತ್ತಿರುತ್ತದೆ. ಈ ಶುಭ ಕರ್ಮಫಲವು ದೊಡ್ಡದಾದ ಮೇಲೆಯೇ ಗುರುವಿನಲ್ಲಿ ಶ್ರದ್ಧಾಭಕ್ತಿಗಳು ಉಂಟಾಗುತ್ತವೆ.

**ಪ್ರಶ್ನೆ: ಗುರುಪೂರ್ಣಿಮೆ ವಿಶೇಷತೆ ಏನು?**

**ಸ್ವಾಮೀಜಿ :** ಪವಿತ್ರ ಗುರುಪೂರ್ಣಿಮೆಯಂದು ಭಕ್ತರು (ಶಿಷ್ಯರು) ತಮ್ಮ ತಮ್ಮ ಗುರುಗಳಿಗೆ ಶ್ರದ್ಧೆ, ಗೌರವಗಳಿಂದ ಪೂಜೆಮಾಡುತ್ತಾರೆ. ಗುರುಪೂರ್ಣಿಮೆಯನ್ನು ವ್ಯಾಸ ಪೂರ್ಣಿಮೆ ಎಂದೂ ಕರೆಯಲಾಗುತ್ತದೆ. ಕಾರಣ; ಇದೇ ತಿಥಿಯಂದು ಶ್ರೀವ್ಯಾಸ ಮಹರ್ಷಿಗಳು ಜನಿಸಿದ್ದು.